ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗೆ ಸೇರಿದ ಜಮೀನನ್ನು ತೋಟದ ಬೆಳೆಗಾರರ ಸಂಘದಿಂದ ಅಕ್ರಮ ವಶ

540(923) ಶ್ರೀ ರಾಮಲಿಂಗರೆಡ್ಡಿ:- (ಜಯನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೋಟದ ಬೆಳೆಗಾರರ ಸಹಕಾರ ಮಾರಾಟ ಸಂಸ್ಕರಣ ಸಂಘದ ಕೇಂದ್ರ ಕಛೇರಿ ಪಕ್ಕದ ಹೊಸೂರು ರಸ್ತೆಯಲ್ಲಿರುವ ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗೆ ಸೇರಿದ ಜಮೀನನ್ನು ಸಂಘವು ಅಕ್ರಮವಾಗಿ ವಹಿಸುಕೊಂಡಿರುವುದು ಸತ್ಯವೇ?

ಆ) ಹಾಗಿದ್ದಲ್ಲಿ ಅಕ್ರಮ ಪ್ರವೇಶವಾಗಿರುವ ಜಮೀನನ್ನು ಉಳಿಸಲು ಬದಲಿ ಜಮೀನನ್ನು ಸಂಘಕ್ಕೆ ನೀಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ:- (ತೋಟಗಾರಿಕೆ ರಾಜ್ಯ ಸಚಿವರು)

ಅ) ಇಲ್ಲ.

ಆ) ಸಂಘವು ಪಕ್ಕದ ಜಮೀನನ್ನು ಉಪಯೋಗಿಸಿಕೊಳ್ಳುತ್ತಿದೆ. ಸದರಿ ಜಮೀನಿನ ಅಸ್ತಿತ್ವವನ್ನು ಸರ್ಕಾರವೇ ಹೊಂದಿದೆ.

ಇ) ಉದ್ಭವಿಸುವುದಿಲ್ಲ.

ತೋಟಗಾರಿಕೆ ಇಲಾಖೆಯಲ್ಲಿನ ಹುದ್ದೆಗಳ ಬಗ್ಗೆ

541(582) ಶ್ರೀ ರಾಮಲಿಂಗಾ ರೆಡ್ಡಿ:- (ಜಯನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ಕೇಂದ್ರ ಕಛೇರಿ ಮತ್ತು ಇತರೆ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ (ಹುದ್ದೆವಾರು ಸಂಖ್ಯೆ ವಿವರಗಳನ್ನು ಕೊಡಿ)

ಆ) ಈ ಎಲ್ಲಾ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಜಾಹಿರಾತು ಪ್ರಕಟಣೆ ಮೂಲಕ ಕರೆಯಲಾಗಿತ್ತೆ?

ಇ) ಈ ಹುದ್ದೆಗಳನ್ನು ತುಂಬಲು ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ?

ಈ) ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ಜನರೆಷ್ಟು?

ಶ್ರೀ ಎಂ. ಎಸ್. ಆತ್ಮಾನಂದ:- (ತೋಟಗಾರಿಕೆ ರಾಜ್ಯ ಸಚಿವರು)

ಅ) ಒಟ್ಟು 604 ಖಾಯಂ ನೌಕರರು ಕೆಲಸ ಮಾಡುತ್ತಿದ್ದಾರೆ. ಹುದ್ದೆವಾರು ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

1)	ವ್ಯವಸ್ಥಾಪಕ ನಿರ್ದೇಶಕರು (ನಿಯೋಜನೆ ಮೇಲೆ)	-	1
2)	ಮ್ಯಾನೇಜರ್ (3ಹುದ್ದೆ ನಿಯೋಜನೆ ಮೇಲೆ)	-	5
3)	ಸೇಲ್ಸ್ ಎಗ್ಸಿಕ್ಯುಟೀವ್	-	1
4)	ಸಹಾಯಕ ಮ್ಯಾನೇಜರ್	-	6
5)	ಮುಖ್ಯ ಗುಮಾಸ್ತರು	-	1

6)	ಉಗ್ರಾಣಪಾಲಕ	-	5
7)	ಪ್ರದಗು ನಗದು ಗುಮಾಸ್ತರು	-	16
8)	ಮೇಲ್ವಿಚಾರಕರು ದರ್ಜೆ	-	2
9)	ದ್ವಿದಗು ಮಾರಾಟಗಾರರು	-	20
10)	ಕಛೇರಿ ಸಹಾಯಕ	-	1
11)	ಕಛೇರಿ ಸಹಾಯಕ ದಾಸ್ತಾನು ಪಾಲಕ		521
12)	ಸ್ವೀಪರ್		1
13)	ವಾಹನ ಚಾಲಕರು	-	24
		ಒಟ್ಟು	604

ಅ) ಇಲ್ಲ

ಆ) ಇಲ್ಲ

ಈ) 567 ಜನ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ.

ಬ್ರಹ್ಮಾವರ್ ಸಬ್-ರಿಜಿಸ್ಟ್ರಾರ್ ಕಛೇರಿ ಕುರಿತು

543 (590) ಶ್ರೀ ಪಿ. ಬಸವರಾಜ್:- (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕ್, ಬ್ರಹ್ಮಾವರ ಸಬ್-ರಿಜಿಸ್ಟ್ರಾರ್ ಕಛೇರಿಯು ಶಿಥಿಲಗೊಂಡಿರುವುದರಿಂದ ದಾಖಲೆಗಳ ಉಸ್ತುವಾರಿ ಕೊಠಡಿಯು ಉಪಯೋಗಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದ್ದರೆ, ಕೈಗೊಂಡ ಕ್ರಮಗಳನ್ನು ತಿಳಿಸುವುದು.

ಆ) ಸಿಬ್ಬಂದಿಗಳ ಕೊರತೆಯಿಂದಾಗಿ ದಾಖಲೆಗಳ ದಸ್ತಾವೇಜುಗಳ ಯಥಾಪ್ರತಿ ಪಡೆಯಲು ಸಾರ್ವಜನಿಕರು ತಿಂಗಳು ಗಟ್ಟಲೆ ಕಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅನಾನುಕೂಲತೆಗಳ ಪರಿಹಾರಕ್ಕಾಗಿ ಸಿಬ್ಬಂದಿಗಳ ಮಂಜೂರಾತಿಯನ್ನು ಸರ್ಕಾರವು ಮಾಡುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಬಂದಿದೆ. ದುರಸ್ತಿ ಮಾಡಲು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಆ) ಬಂದಿದೆ. ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಆನೆಗಳ ಹಾಗೂ ಹುಲಿಗಳ ಸಂತತಿಗಳ ಕ್ಷೀಣತೆ

544(692) ಶ್ರೀ ರಾಜುಗೌಡ:- (ಹನೂರು) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಆನೆಗಳ ಹಾಗೂ ಹುಲಿಗಳ ಸಂತತಿ ದಿನಕಳೆದಂತೆ ಕ್ಷೀಣಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ರಾಜ್ಯದ ಅರಣ್ಯದಲ್ಲಿರುವ ಗಂಡಾನೆ ಮತ್ತು ಹೆಣ್ಣಾನೆ ಮತ್ತು ಹುಲಿಗಳು ಸಂಖ್ಯೆ ಎಷ್ಟು?

ಇ) ಸಂತತಿಗಳು ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು?

ಶ್ರೀ ಈ. ಟಿ. ಶಂಬುನಾಥ್:- (ಅರಣ್ಯ ರಾಜ್ಯ ಸಚಿವರು)

ಅ) ನಿಜವಲ್ಲ